

ಶ್ರೀ ಗಣೇಶ ಶಾರದ ಗುರುಭ್ಯೋ ನಮಃ

# ಚತುರ್ಮೂರ್ತಿ ದರ್ಶನ



ಕಲಿಯುಗದಲ್ಲಿ ಭಗವಂತನನ್ನು ಕಂಡು ಆತ್ಮಾನುಭವವನ್ನು ಉಂಡ ಕೆಲವೇ ಪ್ರಭಾವಿಗಳಾದ ಅನುಭಾದಿಗಳಲ್ಲಿ ಅಗ್ರಗಣ್ಯರು ಶ್ರೀ ವಾದಿರಾಜ ತೀರ್ಥರು. ತತ್ತ್ವಜ್ಞಾನದ ಪ್ರಸಾರ, ವೈಷ್ಣವ ಸಿದ್ಧಾಂತದ ಪುನರುತ್ಥಾನದಲ್ಲಿ ಅದ್ಭುತ ಕ್ರಿಯಾಶಕ್ತಿಯುಳ್ಳವರು ಶ್ರೀವಾದಿರಾಜರು. ತಪಶ್ಶಕ್ತಿ, ಮಂತ್ರಸಿದ್ಧಿ, ನಿಶ್ಚಿತ ತತ್ತ್ವಜ್ಞಾನಗಳ ತ್ರಿವೇಣಿ ಸಂಗಮವೆನಿಸಿದ ವಾದಿರಾಜರಿಗೆ ರಾಜ ಮಹಾರಾಜರುಗಳೇ ನಾ ಮುಂದು ತಾ ಮುಂದು ಎಂದು ಬಂದು ಸೇವೆ ಮಾಡುತ್ತಿದ್ದರು. ಕಾರ್ಕಳದ ಭೈರರನು ತನ್ನ ಮಗನೊಂದಿಗೆ ಮಾಡಿದ ಸೇವೆಯ ಫಲವೇ ಮಹತೋಬಾರ ಶ್ರೀ ಅನಂತ ಪದ್ಮನಾಭ ದೇವಾಲಯ.






ವಾದಿರಾಜರ ದಿವ್ಯ ದೃಷ್ಟಿಗೆ ಗೋಚರವಾಗಿ, ನೆಲ್ಲಿಯೂರು ಗ್ರಾಮದ ಹರಿಯಪ್ಪನ ಕೆರೆಯಲ್ಲಿ ದೊರೆತ ಚತುರ್ಮೂರ್ತಿಗಳು ಪ್ರತಿಷ್ಠಾಪನೆಗೊಂಡ ಅದ್ಭುತ ಅಪರೂಪದ ದಿವ್ಯ ಕ್ಷೇತ್ರ.

ಚತುರ್ಮೂರ್ತಿಶ್ಚತುರ್ಬಾಹುಶ್ಚತುರ್ವ್ಯೂಹಶ್ಚತುರ್ಗತಿಃ ।

ಚತುರಾತ್ಮಾ ಚತುರ್ಭಾವಶ್ಚತುರ್ವೇದವಿದೇಕಪಾತ್ ।

ಚತುರಾತ್ಮಾ ಚತುರ್ವ್ಯೂಹಶ್ಚತುರ್ದಂಷ್ಟ್ರಶ್ಚತುರ್ಭುಜಃ ॥

ಶ್ರೀಪತಿ, ಕ್ಷಿತೀಶ, ಪದ್ಮನಾಭ, ಶೇಷಶಾಹಿ, ಬ್ರಹ್ಮಕೃತ್ ಆದ ಶ್ರೀವತ್ಸವಕ್ಷ ತುಂಬು ಸಂಸಾರದಿಂದೊಡಗೂಡಿ, ನೆಲೆಸಿರುವ ದಿವ್ಯ ಧಾಮ ಅನಂತಶಯನ. ಸೃಷ್ಟಿ ಸ್ಥಿತಿಯಲ್ಲಿ ಜನರಕ್ಷಕನಾಗಿರುವ ಅನಂತ, ಉತ್ತರಕ್ಕೆ ಶಿರಸ್ಸನ್ನಿರಿಸಿ, ಪಶ್ಚಿಮಕ್ಕೆ ಕೃಪಾಕಟಾಕ್ಷ ಬೀರುತ್ತಾ ಇರುವ ಸುಂದರ, ಸಾಕಾರ, ಸರ್ವಾಲಂಕೃತ ಮೂರ್ತಿಯಿರುವ ವಿಶಿಷ್ಟ ಕ್ಷೇತ್ರ ಮಹತೋಬಾರ ಶ್ರೀ ಅನಂತ ಪದ್ಮನಾಭ ದೇವಾಲಯ.

ಅನಂತಾನಂತ ದೇವೇಶ ಅನಂತ ಫಲದಾಯಕ ।

ಅನಂತ ದುಃಖನಾಶಾಯ ಅನಂತಾಯ ನಮೋ ನಮಃ ॥

ಜಯ ವಿಜಯರು ದ್ವಾರಪಾಲಕರಾಗಿರುವ ಅನಂತಶಯನನ ದಿವ್ಯ ಭಂಗಿಯ ಕೆತ್ತನೆಯನ್ನೊಳಗೊಂಡ ಸುಂದರ ಗೋಪುರ.



ಹಿರಣ್ಯಾಕ್ಷ – ಹಿರಣ್ಯಕಶಿಪು, ರಾವಣ – ಕುಂಭಕರ್ಣ, ಶಿಶುಪಾಲ – ದಂತವಕ್ರ ರಾಗಿ ಮೂರು ಜನ್ಮಗಳು ಶ್ರೀಮಹಾವಿಷ್ಣುವಿನ ಬದ್ಧವೈರಿಗಳಾಗಿ ಜನ್ಮತಾಳಿ, ನಂತರ ಪರಮಾತ್ಮನ ಸನ್ನಿಧಿ ವೈಕುಂಠಕ್ಕೆ ಮರಳಿ ಬಂದ ಅಪರೂಪದ ಭಕ್ತರ ಸನ್ನಿಧಿ. ಏಳು ಪ್ರಾಕಾರಗಳ ಏಳು ದ್ವಾರಗಳಲ್ಲಿ ವಾರಾಹ, ನರಸಿಂಹ, ಶ್ರೀರಾಮ ಮತ್ತು ಶ್ರೀಕೃಷ್ಣ ಪರಮಾತ್ಮರ ಉಪಾಸನೆಯಿಂದ ಮೋಕ್ಷವನ್ನು ಪಡೆಯಬಹುದೆಂಬ ದಿವ್ಯ ಸಂದೇಶವನ್ನೀಯುತ್ತಿರುವ ಜಯ-ವಿಜಯರ ಉಪಸ್ಥಿತಿಯಿರುವ ಭೂವೈಕುಂಠ ಶ್ರೀ ಅನಂತ ಪದ್ಮನಾಭ ದೇವಾಲಯ.

ಮುಖ್ಯ ದ್ವಾರದ ನಂತರ ಧ್ವಜಸ್ತಂಭವನ್ನೊಳಗೊಂಡ ವಿಶಾಲವಾದ ಪ್ರಾಂಗಣ.




ನಮ್ಮನ್ನು ಆಶೀರ್ವದಿಸುತ್ತಾ ಸ್ವಾಗತಿಸುತ್ತಿರುವ ಗರುಡ ದೇವರು.



ಬೃಂದಾವನದ ಸನ್ನಿಧಿಯಲ್ಲಿ ಇಕ್ಕೆಡೆಯಲ್ಲಿಯೂ ಜಗುಲಿಯಿರುವ ಪ್ರಾಂಗಣವನ್ನು ದಾಟುತ್ತಿರುವಂತೆ ಅನಂತಶಯನನ ಗರ್ಭಗುಡಿ.




ಮಹಾಸಮುದ್ರದ ಮೇಲೆ ಮೂರು ಮಡಿಕೆಗಳೊಂದಿಗೆ ಏಳು ಹೆಡೆಗಳುಳ್ಳ ಸರ್ವಾಲಂಕೃತ ಆದಿಶೇಷನ ಮೇಲೆ ಓರೆಯಾಗಿ ಪವಡಿಸಿರುವ ಮಹಾಹ್ರದ ಅನಂತಶಯನನ ವಿಶಿಷ್ಟ ಭಂಗಿ. ಬೃಹತ್ ಉರಗದ ಮೇಲೆ ಶಯನಿಸಿರುವ ಜಗತ್ತಿನ ಮೂಲ ಶಕ್ತಿಯಾದ ಪ್ರಕೃತಿಯ ಸ್ವಾಮಿ. ಮೂಲಸೃಷ್ಟನಾದ ಚತುರ್ಮುಖನ ಪಿತ, ಶೇಷಶಯನ. ಆಜ್ಞಾಚಕ್ರವಾಗಿರುವ ಕ್ಷೀರಸಾಗರದಲ್ಲಿ ಸಹಸ್ರಾರದತ್ತ ಹೆಡೆಯೆತ್ತಿ ನಿಂತ ಶೇಷಶಕ್ತಿ ಹಾಗೂ ಅದರ ಮೇಲೆ ಮಲಗಿ ಬ್ರಹ್ಮಾಂಡವೆಂಬ ವಿಶ್ವ ಚಕ್ರವನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ದರ್ಶನವನ್ನೀಯುತ್ತಿರುವ ಮಹೋರಗ, ನಮ್ಮ ಒಳಗಿನ ಹಾಗೂ ಹೊರಗಿನ ಕತ್ತಲನ್ನು ನಾಶ ಮಾಡುವ ಸೂರ್ಯ ಹಾಗೂ ಚಂದ್ರರೆಂಬ ಎರಡು ಕಣ್ಣುಗಳನ್ನು ಜಗತ್ತಿಗೆ ನೀಡಿರುವ, ಎಲ್ಲೆಲ್ಲೂ ಆವರಿಸಿರುವ ಅನಂತನ ಅತ್ಯದ್ಭುತ ರೂಪ.

ಸಹಸ್ರಶೀರ್ಷಾ ಪುರುಷಃ ಸಹಸ್ರಾಕ್ಷಃ ಸಹಸ್ರಪಾತ್ ।
ಸ ಭೂಮಿಂ ವಿಶ್ವತೋ ವೃತ್ವಾತ್ಯತಿಷ್ಠದ್ದಶಾಂಗುಲಮ್ ॥


ಶ್ರೀವಾದಿರಾಜ ತೀರ್ಥರವರ ರಮೇಶ ಸ್ತುತಿಯಲ್ಲಿ ಪ್ರಸ್ತುತ ಪಡಿಸಿರುವಂತೆಯೇ ಇರುವ ದಿವ್ಯ ಸಾಲಂಕೃತ ಮೂರ್ತಿ.

ಪ್ರಾತಃ ಸ್ಮರಾಮಿ ವರಕುಂಡಲ-ಶೋಭಿಗಂಡಂ
ಶೀತಾಂಶು-ಮಂಡಲ-ಮುಖಂ ಸಿತವಾರಿಜಾಕ್ಷಮ್ ।
ಆತಾಮ್ರ-ಕಮ್ರ-ಮುದಿತಾಧರ-ಬಿಂಬ-ಜೃಂಭಿ
ಧ್ಯಾತೃ-ಪ್ರಹರ್ಷ-ಕರ-ಹಾಸರಾಸಂ ರಮೇಶಮ್ ॥ ೧ ॥
ಪ್ರಾತರ್ಭಜಾಮಿ ಶುಭ-ಕೌಸ್ತುಭ-ಕಂಬುಕಂಠಂ
ಸ್ಫೀತಾತ್ಮ-ವಕ್ಷಸಿ ವಿರಾಜಿತ-ಭೂರಿಹಾರಮ್ ।
ಭೀತ-ಸ್ವಭಕ್ತ-ಭಯ-ಭಂಜನ-ಪಾಣಿಪದ್ಮಂ
ಶಾತೋದರಾರ್ಪಿತ-ಜಗದ್-ಭರಮಬ್ಜನಾಭಮ್ ॥ ೨ ॥
ಪ್ರಾತರ್ನಮಾಮಿ ಶುಭ-ಕಿಂಕಿಣಿ-ಮೇಖಲಾಂಗಂ
ಪೀತಾಂಬರಂ ಕರಿ-ಕರೋರು-ಮುದಾರಜಾನುಮ್ ।
ಧ್ಯಾತಾಂಘ್ರಿ-ಯುಗ್ಮ-ರುಚಿರಂ ಜಿತ-ಕಂಜಜಾತ-
ವಾತಾದಿ-ದೇವ-ವರ-ಮೌಲಿ-ಮಣಿಂ ಮುಕುಂದಮ್ ॥ ೩ ॥

ಶ್ರೇಷ್ಠವಾದ ಕುಂಡಲಗಳು ಶೋಭಿಸುವಂತಿಹ ಕಪೋಲಗಳು, ಚಂದ್ರಮಂಡಲದಂತಿರುವ ವದನ, ನಮ್ಮೆಡೆ ಕೃಪಾಕಟಾಕ್ಷ ವೀಕ್ಷಣೆ ನೀಡುತ್ತಿರುವ ಪುಂಡರೀಕದಂತಹ ನೇತ್ರದ್ವಯ, ಆಶ್ವಾಸನೆ ನೀಡುತ್ತಿರುವ ಮಂದಹಾಸ ಭರಿತ ಮನೋಹರ ಅಧರ, ಶಂಖದಂತಹ ಕಂಠದ ಕೆಳಗೆ ಶೋಭಿಸುತ್ತಿರುವ ಶ್ರೀ ಕೌಸ್ತುಭ, ಕಿರುಗೆಜ್ಜೆಗಳಿಂದ ಕೂಡಿದ ಸೊಂಟದ ಪಟ್ಟಿ, ಅದರ ಕೆಳಗೆ ಪೀತಾಂಬರ, ನಾಭಿಯಿಂದ ಉದಯಿಸಿರುವ ಪದ್ಮದೊಳಗೆ ವಿರಾಜಮಾನನಾಗಿರುವ ಚತುರ್ಮುಖ ಬ್ರಹ್ಮ, ಪಾದ ಪದ್ಮಗಳ ಸೇವೆಯಲ್ಲಿ ನಿರತರಾಗಿರುವ ಶ್ರೀದೇವಿ, ಭೂದೇವಿಯರು, ವಿಶಿಷ್ಠವಾದ ನಾಲ್ಕು ಬಾಹುಗಳು, ಬಲಭಾಗದ ಮೇಲ್ಕೈಯಲ್ಲಿ ಮೋಕ್ಷಪ್ರದವಾದ ಪದ್ಮ, ಎಡಗೈಯಲ್ಲಿ ಅಧರ್ಮವನ್ನು ಸಂಹಾರ ಮಾಡುವ ಚಕ್ರ, ಕೆಳಗಿನ ಎಡಗೈಯಲ್ಲಿ ಸ್ವಚ್ಛಂದ ಕಾಮದ ನಿಯಂತ್ರಣದ ಸಂಕೇತ ಗದೆ ಮತ್ತು ಬಲಗೈಯಲ್ಲಿ ಜೀವನ ಸಮೃದ್ಧಿ ಶಂಖ.

ಪದ್ಮ, ಚಕ್ರ, ಗದಾ ಶಂಖಾಧಾರಿಯಾದ ಪದ್ಮನಾಭ.

ಕೇಶವನ ಚತುರ್ವಿಂಶತಿ ರೂಪಗಳ ವೈವಿಧ್ಯತೆ ಅವನ ಆಯುಧಗಳ ಧಾರಣೆಯ ಕ್ರಮದಿಂದ.



ಶಂಖ, ಚಕ್ರ, ಗದಾ, ಪದ್ಮಗಳನ್ನು ಧರಿಸಿರುವ ಚತುರ್ವಿಂಶತಿ ಕೇಶವ ನಾಮಗಳನ್ನೊಳಗೊಂಡ ಕನಕದಾಸರ ಕೃತಿ, ಈಶ ನಿನ್ನ ಚರಣ ಭಜನೆ.

ಈಶ ನಿನ್ನ ಚರಣ ಭಜನೆ ಆಶೆಯಿಂದ ಮಾಡುವೆನು
ದೋಷ ರಾಶಿ ನಾಶ ಮಾಡು ಶ್ರೀಶ ಕೇಶವ ।
ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ
ನಿನ್ನ ಚರಣ ಸ್ಮರಣೆ ಕರುಣಿಸಯ್ಯ ನಾರಾಯಣ ||1||
ಶೋಧಿಸೆನ್ನ ಭವದ ಕಲುಷ ಬೋಧಿಸಯ್ಯ ಜ್ಞಾನವೆನಗೆ
ಬಾಧಿಸುವಾ ಯಮನ ಬಾಧೆ ಬಿಡಿಸು ಮಾಧವ || 2||

ಹಿಂದನೇಕ ಯೋನಿಗಳಲಿ ಬಂದು ಬಂದು ನೊಂದೆ ನಾನು
ಇಂದು ಭವದ ಬಂಧ ಬಿಡಿಸು ತಂದೆ ಗೋವಿಂದನೆ ||3||
ಭ್ರಷ್ಟನೆನಿಸ ಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ
ಶಿಷ್ಟರೊಳಗೆ ಇಟ್ಟು ಕಷ್ಟ ಬಿಡಿಸು ವಿಷ್ಣುವೆ ||4||
ಮೊದಲು ನಿನ್ನ ಪಾದ ಪೂಜೆ ಮುದದಿ ಗೈವೆನಯ್ಯ ನಾನು
ಹೃದಯದೊಳಗೆ ಒದಗಿಸಯ್ಯ ಮಧುಸೂದನ ||5||
ಕವಿದುಕೊಂಡು ಇರುವ ಪಾಪ ಸವೆದು ಹೋಗುವಂತೆ ಮಾಡಿ
ಜವನ ಬಾಧೆಯನ್ನು ಬಿಡಿಸೊ ಘನ ತ್ರಿವಿಕ್ರಮ ||6||
ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ
ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ ||7||
ಮದನನಯ್ಯ ನಿನ್ನ ಮಹಿಮೆ ವದನದಲ್ಲಿ ಇರುವ ಹಾಗೆ
ಹೃದಯದಲ್ಲಿ ಸದನ ಮಾಡು ಮುದದಿ ಶ್ರೀಧರ ||8||
ಹುಸಿಯನಾಡಿ ಹೊಟ್ಟೆ ಹೊರೆವ ವಿಷಯದಲ್ಲಿ ರಸಿಕನೆಂದು
ಹುಸಿಗೆ ನನ್ನ ಹಾಕದಿರೋ ಹೃಷಿಕೇಶನೆ ||9||
ಅಬ್ಧಿಯೊಳಗೆ ಬಿದ್ದು ನಾನು ಒದ್ದುಕೊಂಬೆನಯ್ಯ ಭವದಿ
ಗೆದ್ದು ಪೋಪ ಬುದ್ಧಿ ತೋರೊ ಪದ್ಮನಾಭನೆ||10||
ಪಂಕಜಾಕ್ಷ ನೀನು ಎನ್ನ ಮಂಕುಬುದ್ಧಿ ಬಿಡಿಸಿ ನಿನ್ನ
ಕಿಂಕರನ್ನ ಮಾಡಿಕೊಳ್ಳೊ ಸಂಕರುಷಣ||11||
ಕಾಮಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ
ನುಡಿಸು ಶ್ರೀಮಹಾನುಭಾವನಾದ ದಾಮೋದರ ||12||
ಏಸು ಜನ್ಮ ಬಂದರೇನು ದಾಸನಲ್ಲವೇನೊ ನಿನ್ನ
ಘಾಸಿ ಮಾಡದಿರೋ ಎನ್ನ ವಾಸುದೇವನೆ ||13||
ಬುದ್ಧಿ ಶೂನ್ಯನಾಗಿ ನಾನು ಕದ್ದ ಕಳ್ಳನಾದೆನಯ್ಯ
ತಿದ್ದಿ ಹೃದಯ ಶುದ್ಧಿ ಮಾಡೊ ಪ್ರದ್ಯುಮ್ನನೆ ||14||

ಜನನಿ ಜನಕ ನೀನೆ ಎಂದು ಎನುವೆನಯ್ಯ ದೀನಬಂಧು
ಎನಗೆ ಮುಕ್ತಿ ಪಾಲಿಸಿಂದು ಅನಿರುದ್ಧನೆ ||15||
ಹರುಷದಿಂದ ನಿನ್ನ ನಾಮ ಸ್ಮರಿಸುವಂತೆ ಮಾಡು
ನೇಮ ಇರಿಸು ಚರಣದಲ್ಲಿ ಕ್ಷೇಮ ಪುರುಷೋತ್ತಮ ||16||
ಸಾಧು ಸಂಗ ಕೊಟ್ಟು ನಿನ್ನ ಪಾದಭಜಕನೆನಿಸು ಎನ್ನ
ಭೇದ ಮಾಡಿ ನೋಡದಿರೋ ಅಧೋಕ್ಷಜ ||17||
ಚಾರು ಚರಣ ತೋರಿ ಎನಗೆ ಪಾರುಗಾಣಿಸಯ್ಯ
ಕೊನೆಗೆ ಭಾರ ಹಾಕಿ ಇರುವೆ ನಿನಗೆ ನಾರಸಿಂಹನೆ ||18||
ಸಂಚಿತಾರ್ಥ ಪಾಪಗಳನು ಕಿಂಚಿತಾದರುಳಿಯದಂತೆ
ಮುಂಚಿತಾಗಿ ಕಳೆದು ಪೊರೆಯೊ ಸ್ವಾಮಿ ಅಚ್ಯುತ||19||
ಜ್ಞಾನ ಭಕ್ತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಎನ್ನ
ಹೀನ ಬುದ್ಧಿ ಬಿಡಿಸೊ ಮುನ್ನ ಜನಾರ್ದನ ||20||




ಜಪ ತಪ ಅನುಷ್ಠಾನ ನೀನು ಒಪ್ಪುವಂತೆ ಮಾಡಲಿಲ್ಲ
ತಪ್ಪ ಕೋಟಿ ಕ್ಷಮಿಸಬೇಕು ಉಪೇಂದ್ರನೆ ||21||
ಮೊರೆಯನಿಡುವೆನಯ್ಯ ನಿನಗೆ ಸೆರೆಯ ಬಿಡಿಸು
ಭವದ
ಎನಗೆ ಇರಿಸು ಭಕ್ತರೊಳಗೆ ಪರಮಪುರುಷ
ಶ್ರೀಹರೇ||22||
ಪುಟ್ಟಿಸಲೇ ಬೇಡವಿನ್ನು ಪುಟ್ಟಿಸಿದಕೆ ಪಾಲಿಸಿನ್ನು
ಇಷ್ಟು ಬೇಡಿಕೊಂಬೆ ನಾನು ಶ್ರೀಕೃಷ್ಣನೆ||23||
ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವವರ
ಅರ್ತಿಯಿಂದ ಕಾಯದಿರನು ಕರ್ತೃ ಕೇಶವ ||24||
ಮರೆತು ಬಿಡದೆ ಹರಿಯ ನಾಮ ಬರೆದು ಓದಿ
ಕೇಳುವರಿಗೆ ಕರೆದು ಮುಕ್ತಿ ಕೊಡುವ ನೆಲೆಯಾದಿ
ಕೇಶವ ||25||

ಸೃಷ್ಟಿಯ ಆದಿಯಲ್ಲಿ ವ್ಯಕ್ತನಾದ ಭಗವಂತನ ಚತುರ್ಮೂರ್ತಿಗಳು ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ. ನಂತರ ಕೇಶವಾದಿ ಚತುರ್ವಿಂಶತಿ ರೂಪ. ಅನಂತರ ನಾರಾಯಣಾದಿ ಅಷ್ಟಾಧಿಕಶತತಮ ರೂಪ. ತದನಂತರ ವಿಶ್ವಾದಿ ಸಹಸ್ರ ರೂಪ. ಭಗವಂತನ ರೂಪ ಅನಂತ.

ವ್ಯಕ್ತಿ ಏಕ. ಅಭಿವ್ಯಕ್ತಿ ಅನಂತ.

ಅನಂತಾನಂತ ಶಯನ ಪುರಾಣ ಪುರುಷೋತ್ತಮ ।

ರಂಗನಾಥ ಜಗನ್ನಾಥ ನಾಥ ತುಭ್ಯಂ ನಮೋ ನಮಃ ॥

ಗರ್ಭಗುಡಿಯ ಪ್ರದಕ್ಷಿಣಾ ಪಥದಲ್ಲಿ ವಿಘ್ನನಿವಾರಕ ಗಣಪನೊಂದಿಗೆ ಮೂರು ದಿಕ್ಕುಗಳಲ್ಲೂ ವಿರಾಜಿಸುತ್ತಿರುವ ದಾಮೋದರ, ಸಂಕರ್ಷಣ, ವಾಸುದೇವರ ದಿವ್ಯ ಮಂಗಳ ಸ್ವರೂಪಗಳು.



ಪದ್ಮನಾಭನಾಗಿ, ದಾಮೋದರನಾಗಿ, ಸಂಕರ್ಷಣನಾಗಿ ಮತ್ತು ವಾಸುದೇವನಾಗಿ ಏಕ ಕ್ಷೇತ್ರದಲ್ಲಿ ಸೃಷ್ಟಿಯ ಆದಿಯ ಪರಮಾತ್ಮನ ರೂಪಗಳನ್ನು ಬಿಂಬಿಸುತ್ತಿರುವ ಪವಿತ್ರ ಕ್ಷೇತ್ರ ಶ್ರೀ ಅನಂತ ಪದ್ಮನಾಭ ದೇವಾಲಯ. ಸೃಷ್ಟಿಗೆ ಕಾರಣವಾದ ಪದ್ಮನಾಭ, ಸ್ಥಿತಿಗೆ ಕಾರಣವಾದ ದಾಮೋದರ, ಸಂಹಾರಕ್ಕೆ ಕಾರಣವಾದ ಸಂಕರ್ಷಣ, ಮೋಕ್ಷಪ್ರದನಾದ ವಾಸುದೇವ ನೆಲೆಸಿರುವ ದಿವ್ಯ ಮಂಗಳ ಧಾಮ. ಚತುರ್ವ್ಯೂಹ ಮೂರ್ತಿಗಳಾದ ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವರ ರೂಪದಲ್ಲಿ ತನ್ನನ್ನು ತಾನೇ ಸೃಷ್ಟಿಮಾಡಿಕೊಂಡಿರುವ ಜಗದಾದಿಜನಿರುವ ಪುಣ್ಯ ಕ್ಷೇತ್ರ. ಪದ್ಮನಾಭ, ದಾಮೋದರ, ಸಂಕರ್ಷಣ, ವಾಸುದೇವ ಎಂಬ ದಿವ್ಯ ರೂಪಗಳಲ್ಲಿದ್ದು, ಚತುರತೆಯಿಂದ ಲೋಕದ ಸೃಷ್ಟಿ ಮಾಡಿ, ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯಾವಸ್ಥೆಗಳನ್ನೂ, ದೇಹವೆಂಬ ಮಹಾನಗರಿಯನ್ನು ಅಚ್ಚುಕಟ್ಟಾಗಿ ನಿಯಂತ್ರಿಸುವ ಚತುರಶ್ರ ಪರಂಧಾಮನಿರುವ ದಿವ್ಯ ನೆಲೆ. ನಾಲ್ಕು ವೇದಗಳ ಅಂತರಂಗದ ಸಂಪೂರ್ಣ ಅರ್ಥವನ್ನು ಬಲ್ಲ ಚತುರ್ವೇದ, ನಾಲ್ಕು ಪುರುಷಾರ್ಥಗಳನ್ನು, ನಾಲ್ಕು ವರ್ಣಗಳನ್ನು ಸೃಷ್ಟಿಸಿದ ಚತುರ್ಭಾವ, ಆತ್ಮ-ಅಂತರಾತ್ಮ-ಪರಮಾತ್ಮ-ಜ್ಞಾನಾತ್ಮ ಎಂಬ ನಾಲ್ಕು ರೂಪಗಳಿಂದ ನಮ್ಮನ್ನು ನಿಯಂತ್ರಿಸುವ ಚತುರಾತ್ಮಾ, ವಿಶ್ವ-ತೈಜಸ-ಪ್ರಾಜ್ಞ-ತುರೀಯ ಸ್ಥಿತಿಗಳನ್ನು ನಿಯಂತ್ರಿಸುವ ಚತುರ್ಮೂರ್ತಿ, ಅಂಬುಜ-ಸ್ವೇದಜ-ಉದ್ಭಿಜ-ಜರಾಯುಜ ಎಂಬ ನಾಲ್ಕು ಬಗೆಯ ಜೀವಜಾತದ ಸೃಷ್ಟಿಕರ್ತ ಚತುರಾತ್ಮಾ, ಸಾಲೋಕ್ಯ-ಸಾಮೀಪ್ಯ-ಸಾರೂಪ್ಯ-ಸಾಯುಜ್ಯ ಮುಕ್ತಿಯನ್ನು ಕರುಣಿಸುವ ಚತುರ್ಗತಿ, ಸ್ಥೂಲ-ಸೂಕ್ಷ್ಮ-ಲಿಂಗ-ಸ್ವರೂಪ ಎನ್ನುವ ನಾಲ್ಕು ಬಗೆಯ ಜೀವಜಾತದ ಸೃಷ್ಟಿಕರ್ತ ಚತುರಾತ್ಮಾ, ಹೀಗೆ ಭಕ್ತರ ರಕ್ಷಣೆಗಾಗಿ, ಅಧರ್ಮದ ನಾಶಕ್ಕಾಗಿ ಚಕ್ರಧಾರಿಯಾಗಿ ಧರೆಗೆ ಇಳಿದು ಬಂದಿರುವ ಚತುರ್ಮೂರ್ತಿ ಪರಂಧಾಮನ ಸನ್ನಿಧಾನ ಶ್ರೀ ಅನಂತ ಪದ್ಮನಾಭನ ದೇವಾಲಯ.

ಕ್ಷೀರೋದನ್ವತ್ಪ್ರದೇಶೇ ಶುಚಿಮಣಿವಲಸತ್ಸೈಕತೇ ಮೌಕ್ತಿಕಾನಾಂ
ಮಾಲಾಕ್ಲುಪ್ತಾಸನಸ್ಥಃ ಸ್ಫಟಿಕಮಣಿನಿಭೈರ್ಮೌಕ್ತಿಕೈರ್ಮಂಡಿತಾಂಗಃ ।
ಶುಭ್ರೈರಭ್ರೈರದಭ್ರೈರುಪರಿವಿರಚಿತೈರ್ಮುಕ್ತಪೀಯೂಷವರ್ಷೈ-
-ರಾನಂದೀ ನಃ ಪುನೀಯಾದರಿನಳಿನಗದಾಶಂಖಪಾಣಿರ್ಮುಕುಂದಃ ॥
ಭೂಃ ಪಾದೌ ಯಸ್ಯ ನಾಭಿರ್ವಿಯದಸುರನಿಲಶ್ಚಂದ್ರ ಸೂರ್ಯೌ ಚ ನೇತ್ರೇ
ಕರ್ಣಾವಾಸಾಃ ಶಿರೋ ದ್ಯೌರ್ಮುಖಮಪಿ ದಹನೋ ಯಸ್ಯ ವಾಸ್ತೇಯಮಬ್ಧಿಃ ।
ಅಂತಃಸ್ಥಂ ಯಸ್ಯ ವಿಶ್ವಂ ಸುರನರಖಗಗೋಭೋಗಿಗಂಧರ್ವದೈತ್ಯೈಃ

ಚಿತ್ರಂ ರಂರಮ್ಯತೇ ತಂ ತ್ರಿಭುವನವಪುಷಂ ವಿಷ್ಣುಮೀಶಂ ನಮಾಮಿ ॥

ಅನಂತಪದ್ಮನಾಭನ ಧ್ಯಾನದ ನಂತರ ಗರ್ಭಗುಡಿಯ ಪ್ರದಕ್ಷಿಣಾ ಪಥದಲ್ಲಿ ಸಾಗುತ್ತಿದ್ದಂತೆಯೇ ಎಡಗಡೆ ಪವಿತ್ರ ತೀರ್ಥವಿರುವ ಬಾವಿ. ಮುಂದಕ್ಕೆ ಶ್ರೀತುಳಸೀ ಬೃಂದಾವನ ಮತ್ತು ದಾಮೋದರನ ಸನ್ನಿಧಿ. ಸಹಸ್ರಬಾಹು ಭಗವಂತ ನಾಲ್ಕು ಬಾಹುಗಳ ಮೂರ್ತಿಯಾಗಿ ಶಂಖ, ಗದಾ, ಚಕ್ರ, ಪದ್ಮ ಧರಿಸಿ, ನಮ್ಮೆಲ್ಲರ ಪಾಮರತ್ವ ಬಿಡಿಸುತ್ತಿರುವ ದಾಮೋದರ ಸ್ತೋತ್ರ.

ಸಿಂಧುದೇಶೋದ್ಭವೋ ವಿಪ್ರೋ ನಾಮ್ನಾ ಸತ್ಯವ್ರತಸ್ಸುಧೀಃ ।
ವಿರಕ್ತ ಇಂದ್ರಿಯಾರ್ಥೇಭ್ಯಸ್ತ್ಯಕ್ತ್ವಾ ಪುತ್ರಗೃಹಾದಿಕಮ್ ॥
ಬೃಂದಾವನೇ ಸ್ಥಿತಃ ಕೃಷ್ಣಮಾರರಾಧ ದಿವಾನಿಶಮ್ ।
ನಿಸ್ಸ್ವಸ್ಸತ್ಯವ್ರತೋ ವಿಪ್ರೋ ನಿರ್ಜನೇವ್ಯಗ್ರಮಾನಸಃ ॥
ಕಾರ್ತಿಕೇ ಪೂಜಯಾಮಾಸ ಪ್ರೀತ್ಯಾ ದಾಮೋದರಂ ನೃಪ ।
ತೃತೀಯೇಹ್ನಿ ಸಕೃದ್ಭುಂಕ್ತೇ ಪತ್ರಂ ಮೂಲಂ ಫಲಂ ತಥಾ ॥
ಪೂಜಯಿತ್ವಾ ಹರಿಂ ಸ್ತೌತಿ ಪ್ರೀತ್ಯಾ ದಾಮೋದರಾಭಿದಮ್ ॥

ಸತ್ಯವ್ರತ ಉವಾಚ –

ನಮಾಮೀಶ್ವರಂ ಸಚ್ಚಿದಾನಂದರೂಪಂ
ಲಸತ್ಕುಂಡಲಂ ಗೋಕುಲೇ ಭ್ರಾಜಮಾನಮ್ ।
ಯಶೋದಾಭಿಯೋಲೂಖಲೇ ಧಾವಮಾನಂ
ಪರಾಮೃಷ್ಟಮತ್ಯಂತತೋ ದೂತಗೋಪ್ಯಾ ॥
ರುದಂತಂ ಮುಹುರ್ನೇತ್ರಯುಗ್ಮಂ ಮೃಜಂತಂ
ಕರಾಂಭೋಜಯುಗ್ಮೇನ ಸಾತಂಕನೇತ್ರಮ್ ।
ಮುಹುಶ್ಶ್ವಾಸಕಂ ಪತ್ರಿರೇಖಾಂಕ ಕಂಠಂ
ಸ್ಥಿತಂ ನೌಮಿ ದಾಮೋದರಂ ಭಕ್ತವಂದ್ಯಮ್ ॥
ವರಂ ದೇವ ದೇಹೀಶ ಮೋಕ್ಷಾವಧಿಂ ವಾ ನ ಚಾನ್ಯಂ ವೃಣೇಹಂ ವರೇಶಾದಪೀಹ ।
ಇದಂತೇ ವಪುರ್ನಾಥ ಗೋಪಾಲಬಾಲಂ ಸದಾ ಮೇ ಮನಸ್ಯಾವಿರಾಸ್ತಾಂ ಕಿಮನ್ಯೈಃ ॥
ಇದಂ ತೇ ಮುಖಾಂಭೋಜಮತ್ಯಂತನೀಲೈರ್ವೃತಂ ಕುಂತಲೈಸ್ಸ್ನಿಗ್ಧವಕ್ತ್ರೈಶ್ಚ ಗೋಪ್ಯಾ
।

ಮುಹುಶ್ಚುಂಬಿತಂ ಬಿಂಬರಕ್ತಾಧರಂ ಮೇ ಮನಸ್ಯಾವಿರಾಸ್ತಾಮಲಂ ಲಕ್ಷಲಾಭೈಃ ॥

ನಮೋ ದೇವ ದಾಮೋದರಾನಂತ ವಿಷ್ಣೋ ಪ್ರಸೀದ ಪ್ರಭೋ ದುಃಖಜಾಲಾಬ್ಧಿಮಗ್ನಮ್ ।

ಕೃಪಾದೃಷ್ಟಿವೃಷ್ಟ್ಯಾತಿದೀನಂ ಚ ರಕ್ಷ ಗೃಹಾಣೇಶ ಮಾಮಜ್ಞಮೇವಾಕ್ಷಿದೃಶ್ಯಮ್ ॥

ಕುಬೇರಾತ್ಮಜೌ ವೃಕ್ಷಮೂರ್ತಿ ಚ ಯದ್ವತ್ತ್ವಯಾ ಮೋಚಿತೌ ಭಕ್ತಿಭಾಜೌ ಕೃತೌ ಚ ।

ತಥಾ ಪ್ರೇಮಭಕ್ತಿಂ ಸ್ವಕಾಂ ಮೇ ಪ್ರಯಚ್ಛ ನ ಮೋಕ್ಷೇಗ್ರಹೋ ಮೇಸ್ತಿ ದಾಮೋದರೇಹ ॥

ನಮಸ್ತೇ ಸುಧಾಮ್ನೇ ಸ್ಫುರದ್ವೀಪ್ತಧಾಮ್ನೇ

ತಥಾಂತಃಸ್ಥವಿಶ್ವಸ್ಯಧಾಮ್ನೇ ನಮಸ್ತೇ ।

ನಮೋ ರಾಧಿಕಾಯೈ ತ್ವದೀಯಪ್ರಿಯಾಯೈ

ನಮೋನಂತಲೀಲಾಯ ದೇವಾಯ ತುಭ್ಯಮ್ ॥

ನಾರದ ಉವಾಚ –

ಸತ್ಯವ್ರತದ್ವಿಜಸ್ತೋತ್ರಂ ಶ್ರುತ್ವಾ ದಾಮೋದರೋ ಹರಿಃ ।

ವಿದ್ಯುಲ್ಲೀಲಾಚಮತ್ಕಾರೋ ಹೃದಯೇ ಶನಕೈರಭೂತ್ ॥

ಇತಿ ಶ್ರೀಮಹಾಪುರಾಣೇ ಸತ್ಯವ್ರತಕೃತ ದಾಮೋದರ ಸ್ತೋತ್ರಮ್ ।

ಪ್ರದಕ್ಷಿಣೆ ಮುಂದುವರಿದಂತೆ ಪೂರ್ವಾಭಿಮುಖರಾಗಿ ದರ್ಶನವೀಯುತ್ತಿರುವ ವಿಘ್ನವಿನಾಶಕ ಹೇರಂಭ ಗಣೇಶ ಮತ್ತು ಸಂಕರ್ಷಣ.



ಮೋಕ್ಷಪ್ರದ ಶಂಖ, ಪದ್ಮ, ಚಕ್ರ, ಗದಾಧಾರಿಯಾಗಿ ಸತ್ಸಂತಾನಾಭಿವೃದ್ಧಿ ಮಾಡುವ ಅರಂವಿದಾಕ್ಷ ಸಂಕರ್ಷಣ ಸ್ತವಂ.

ಓಂ ನಮಸ್ತುಭ್ಯಂ ಭಗವತೇ ವಾಸುದೇವಾಯ ಧೀಮಹಿ ।
ಪ್ರದ್ಯುಮ್ನಾಯಾನಿರುದ್ಧಾಯ ನಮಃ ಸಂಕರ್ಷಣಾಯ ಚ ॥
ನಮೋ ವಿಜ್ಞಾನಮಾತ್ರಾಯ ಪರಮಾನಂದಮೂರ್ತಯೇ ।
ಆತ್ಮಾರಾಮಾಯ ಶಾಂತಾಯ ನಿವೃತ್ತದ್ವೈತದೃಷ್ಟಯೇ ॥
ಆತ್ಮಾನಂದಾನುಭೂತ್ಯೈವ ನ್ಯಸ್ತಶಕ್ತ್ಯೂರ್ಮಯೇ ನಮಃ ।
ಹೃಷೀಕೇಶಾಯ ಮಹತೇ ನಮಸ್ತೇ ವಿಶ್ವಮೂರ್ತಯೇ ॥
ವಚಸ್ಯುಪರತೇ ಪ್ರಾಪ್ಯ ಯ ಏಕೋ ಮನಸಾ ಸಹ ।
ಅನಾಮರೂಪಶ್ಚಿನ್ಮಾತ್ರ ಸೋಽವ್ಯಾನ್ನಃ ಸದಸ್ತ್ಪರಃ ॥
ಯಸ್ಮಿನ್ನಿದಂ ಯತಶ್ಚೇದಂ ತಿಷ್ಠತ್ಯಪ್ಯೇತಿ ಜಾಯತೇ ।
ಮೃಣ್ಮಯೇಷ್ವಿವ ಮೃಜ್ಜಾತಿಸ್ತಸ್ಮೈ ತೇ ಬ್ರಹ್ಮಣೇ ನಮಃ ॥
ಯನ್ನ ಸ್ಪೃಶಂತಿ ನ ವಿದುರ್ಮಮೋಬುದ್ಧೀಂದ್ರಿಯಾಸವಃ ।
ಅಂತರ್ಬಹಿಶ್ಚ ವಿತತಂ ವ್ಯೋಮವತ್ತನ್ನತೋಽಸ್ಮ್ಯಹಮ್ ॥
ದೇಹೇಂದ್ರಿಯಪ್ರಾಣಮನೋಧಿಯೋ ಮೀ ಯದಂಶವಿದ್ಧಾಃ ಪ್ರಚರಂತಿ ಕರ್ಮಸು ।
ನೈವಾನ್ಯದಾ ಲೌಹಮಿವಾಪ್ರತಪ್ತಂ ಸ್ಥಾನೇಷು ತದ್ದ್ರಷ್ಟೃಪದೇಶಮೇತಿ ॥
ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ ।
ಮಹಾವಿಭೂತಿಪತಯೇ ಸಕಲಸಾತ್ತ್ವತಪರಿವೃಡನಿಕರ ॥

ಆಗ್ನೇಯದಲ್ಲಿ ನಾಗದೇವತೆಗಳೊಂದಿಗೆ ವ್ಯಾಸರಾಜ ತೀರ್ಥರಿಂದ ಪ್ರತಿಷ್ಠಾಪಿಸಲಾದ ಮುಖ್ಯ ಪ್ರಾಣದೇವರು. ಈಗ ವಾದಿರಾಜರ ಆಂಜನೇಯನೆ ಅಮರ ವಂದಿತ ಕೃತಿ.

ಆಂಜನೇಯನೆ ಅಮರ ವಂದಿತ ಕಂಜನಾಭನ ದೂತನೆ || ಪ ||
ಮಂಜಿನೋಲಗದಂತೆ ಶರಧಿಯ ದಾಟಿದ ಮಹಾ ಧೀರನೆ || ಅ.ಪ ||
ಆಂಜನೇಯನೆ ನಿನ್ನ ಗುಣಗಳ ಪೊಗಳಲಳವೆ ಪ್ರಖ್ಯಾತನೆ
ಸಂಜೀವನವ ತಂದು ಕಪಿಗಳ ನಂಜು ಕಳೆದ ಪ್ರಖ್ಯಾತನೆ || ೧ ||
ಕಾಮನಿಗ್ರಹನೆನಿಸಿ ಸುರರಭಿಮಾನಿ ದೇವತೆ ಎನಿಸಿದೆ

ರಾಮಪಾದಕ್ಕೆರಗಿ ನಡೆದು ನಿಸ್ಸೀಮ ನೀನೆಂದೆನಿಸಿದೆ || ೨ ||

ಸಿಂಧು ಹಾರಿದೆ ಶ್ರೀಘ್ರದಿಂದಲಿ ಬಂದು ಸೀತೆಗೆ ನಮಿಸಿದೆ

ತಂದು ಮುದ್ರೆಯನಿತ್ತು ಮಾತೆಯ ಮನವ ಸಂತೋಷ ಪಡಿಸಿದೆ || ೩ ||

ಜನಕ ತನುಜೆಯ ಮನವ ಹರುಷಿಸಿ ವನವ ತಿದ್ತೀಡಾಡಿದೆ

ದನುಜರನ್ನು ಸದೆದು ಲಂಕೆಯ ಅನಲಾಗುಹುತಿ ಮಾಡಿದೆ || ೪ ||

ರಾಮಕಾರ್ಯವ ವಹಿಸಿ ಅಕ್ಷಕುಮಾರನನು ಸಂಹರಿಸಿದೆ

ಘೋರ ರಕ್ಕಸರೆಂಬುವರನು ಮಾರಿವಶವನು ಗೈಸಿದೆ || ೫ ||

ಭರದಿ ಬಂದು ರಾಮಪಾದಕ್ಕೆರಗಿ ಬಿನ್ನಹ ಮಾಡಿದೆ

ಉರಗಗಿರಿ ಹಯವದನನ ಪರಮ ಭಕ್ತನೆಂದೆನಿಸಿದೆ || ೬ ||

ವಾಸುದೇವಾಶ್ರಯೋ ಮರ್ತ್ಯೋ ವಾಸುದೇವ ಪರಾಯಣಃ ।

ಸರ್ವಪಾಪ ವಿಶುದ್ಧಾತ್ಮಾ ಯಾತಿ ಬ್ರಹ್ಮ ಸನಾತನಮ್ ॥

ನ ವಾಸುದೇವ ಭಕ್ತಾನಾಮಶುಭಂ ವಿದ್ಯತೇ ಕ್ವಚಿತ್ ।

ಜನ್ಮ ಮೃತ್ಯು ಜರಾ ವ್ಯಾಧಿ ಭಯಂ ನೈವೋಪಜಾಯತೇ ॥

ದಕ್ಷಿಣ ದಿಕ್ಕಿನಲ್ಲಿ ಶಂಖ, ಚಕ್ರ, ಪದ್ಮ, ಗದಾಧಾರಿಯಾಗಿ ನಮ್ಮ ಎಲ್ಲಾ ಪಾಪಗಳನ್ನು ಪ್ರಕ್ಷಾಳನೆ ಮಾಡಿ ಪರಿಶುದ್ಧ ಸ್ವರೂಪರಾಗಿ ಶಾಶ್ವತ ಪರತತ್ವದೆಡೆಗೆ ಕೊಂಡೊಯ್ಯುವ ವಾಸುದೇವ ಸ್ತೋತ್ರಮ್.

ವಿಶ್ವಾವಸುರ್ವಿಶ್ವಮೂರ್ತಿರ್ವಿಶ್ವೇಶೋ ವಿಷ್ವಕ್ಸೇನೋ ವಿಶ್ವಕರ್ಮಾ ವಶೀ ಚ ।

ವಿಶ್ವೇಶ್ವರೋ ವಾಸುದೇವೋಽಸಿ ತಸ್ಮಾದ್ಯೋಗಾತ್ಮಾನಂ ದೈವತಂ ತ್ವಾಮುಪೈಮಿ ॥ 47 ॥

ಜಯ ವಿಶ್ವ ಮಹಾದೇವ ಜಯ ಲೋಕಹಿತೇರತ ।

ಜಯ ಯೋಗೀಶ್ವರ ವಿಭೋ ಜಯ ಯೋಗಪರಾವರ ॥ 48 ॥

ಪದ್ಮಗರ್ಭ ವಿಶಾಲಾಕ್ಷ ಜಯ ಲೋಕೇಶ್ವರೇಶ್ವರ ।

ಭೂತಭವ್ಯಭವನ್ನಾಥ ಜಯ ಸೌಮ್ಯಾತ್ಮಜಾತ್ಮಜ ॥ 49 ॥

ಅಸಂಖ್ಯೇಯಗುಣಾಧಾರ ಜಯ ಸರ್ವಪರಾಯಣ ।

ನಾರಾಯಣ ಸುದುಷ್ಪಾರ ಜಯ ಶಾರಂಗಧನುರ್ಧರ ॥ 50 ॥

ಜಯ ಸರ್ವಗುಣೋಪೇತ ವಿಶ್ವಮೂರ್ತೇ ನಿರಾಮಯ ।
ವಿಶ್ವೇಶ್ವರ ಮಹಾಬಾಹೋ ಜಯ ಲೋಕಾರ್ಥತತ್ಪರ ॥ 51 ॥
ಮಹೋರಗವರಾಹಾದ್ಯ ಹರಿಕೇಶ ವಿಭೋ ಜಯ ।
ಹರಿವಾಸ ದಿಶಾಮೀಶ ವಿಶ್ವಾವಾಸಾಮಿತಾವ್ಯಯ ॥ 52 ॥
ವ್ಯಕ್ತಾವ್ಯಕ್ತಾಮಿತಸ್ಥಾನ ನಿಯತೇಂದ್ರಿಯ ಸತ್ಕ್ರಿಯ ।
ಅಸಂಖ್ಯೇಯಾತ್ಮಭಾವಜ್ಞ ಜಯ ಗಂಭೀರಕಾಮದ ॥ 53 ॥
ಅನಂತವಿದಿತ ಬ್ರಹ್ಮನ್ ನಿತ್ಯಭೂತವಿಭಾವನ ।
ಕೃತಕಾರ್ಯ ಕೃತಪ್ರಜ್ಞ ಧರ್ಮಜ್ಞ ವಿಜಯಾವಹ ॥ 54 ॥
ಗುಹ್ಯಾತ್ಮನ್ ಸರ್ವಯೋಗಾತ್ಮನ್ ಸ್ಫುಟ ಸಂಭೂತ ಸಂಭವ ।
ಭೂತಾದ್ಯ ಲೋಕತತ್ತ್ವೇಶ ಜಯ ಭೂತವಿಭಾವನ ॥ 55 ॥
ಆತ್ಮಯೋನೇ ಮಹಾಭಾಗ ಕಲ್ಪಸಂಕ್ಷೇಪತತ್ಪರ ।
ಉದ್ಭಾವನಮನೋಭಾವ ಜಯ ಬ್ರಹ್ಮಜನಪ್ರಿಯ ॥ 56 ॥
ನಿಸರ್ಗಸರ್ಗನಿರತ ಕಾಮೇಶ ಪರಮೇಶ್ವರ ।
ಅಮೃತೋದ್ಭವ ಸದ್ಭಾವ ಮುಕ್ತಾತ್ಮನ್ ವಿಜಯಪ್ರದ ॥ 57 ॥
ಪ್ರಜಾಪತಿಪತೇ ದೇವ ಪದ್ಮನಾಭ ಮಹಾಬಲ ।
ಆತ್ಮಭೂತ ಮಹಾಭೂತ ಸತ್ವಾತ್ಮನ್ ಜಯ ಸರ್ವದಾ ॥ 58 ॥
ಪಾದೌ ತವ ಧರಾ ದೇವೀ ದಿಶೋ ಬಾಹು ದಿವಂ ಶಿರಃ ।
ಮೂರ್ತಿಸ್ತೇಽಹಂ ಸುರಾಃ ಕಾಯಶ್ಚಂದ್ರಾದಿತ್ಯೌ ಚ ಚಕ್ಷುಷೀ ॥ 59 ॥
ಬಲಂ ತಪಶ್ಚ ಸತ್ಯಂ ಚ ಕರ್ಮ ಧರ್ಮಾತ್ಮಜಂ ತವ ।
ತೇಜೋಽಗ್ನಿಃ ಪವನಃ ಶ್ವಾಸ ಆಪಸ್ತೇ ಸ್ವೇದಸಂಭವಾಃ ॥ 60 ॥
ಅಶ್ವಿನೌ ಶ್ರವಣೌ ನಿತ್ಯಂ ದೇವೀ ಜಿಹ್ವಾ ಸರಸ್ವತೀ ।
ವೇದಾಃ ಸಂಸ್ಕಾರನಿಷ್ಠಾ ಹಿ ತ್ವಯೀದಂ ಜಗದಾಶ್ರಿತಮ್ ॥ 61 ॥
ನ ಸಂಖ್ಯಾ ನ ಪರೀಮಾಣಂ ನ ತೇಜೋ ನ ಪರಾಕ್ರಮಮ್ ।
ನ ಬಲಂ ಯೋಗಯೋಗೀಶ ಜಾನೀಮಸ್ತೇ ನ ಸಂಭವಮ್ ॥ 62 ॥

ತ್ವದ್ಭಕ್ತಿನಿರತಾ ದೇವ ನಿಯಮೈಸ್ತ್ವಾಂ ಸಮಾಶ್ರಿತಾಃ ।
ಅರ್ಚಯಾಮಃ ಸದಾ ವಿಷ್ಣೋ ಪರಮೇಶಂ ಮಹೇಶ್ವರಮ್ ॥ 63 ॥
ಋಷಯೋ ದೇವಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ಪಿಶಾಚಾ ಮಾನುಷಾಶ್ಚೈವ ಮೃಗಪಕ್ಷಿಸರೀಸೃಪಾಃ ॥ 64 ॥
ಏವಮಾದಿ ಮಯಾ ಸೃಷ್ಟಂ ಪೃಥಿವ್ಯಾಂ ತ್ವತ್ಪ್ರಸಾದಜಮ್ ।
ಪದ್ಮನಾಭ ವಿಶಾಲಾಕ್ಷ ಕೃಷ್ಣ ದುಃಖಪ್ರಣಾಶನ ॥ 65 ॥
ತ್ವಂ ಗತಿಃ ಸರ್ವಭೂತಾನಾಂ ತ್ವಂ ನೇತಾ ತ್ವಂ ಜಗದ್ಗುರುಃ ।
ತ್ವತ್ಪ್ರಸಾದೇನ ದೇವೇಶ ಸುಖಿನೋ ವಿಬುಧಾಃ ಸದಾ ॥ 66 ॥
ಪೃಥಿವೀ ನಿರ್ಭಯಾ ದೇವ ತ್ವತ್ಪ್ರಸಾದಾತ್ಸದಾಽಭವತ್ ।
ತಸ್ಮಾದ್ಭವ ವಿಶಾಲಾಕ್ಷ ಯದುವಂಶವಿವರ್ಧನಃ ॥ 67 ॥
ಧರ್ಮಸಂಸ್ಥಾಪನಾರ್ಥಾಯ ದೈತ್ಯಾನಾಂ ಚ ವಧಾಯ ಚ ।
ಜಗತೋ ಧಾರಣಾರ್ಥಾಯ ವಿಜ್ಞಾಪ್ಯಂ ಕುರು ಮೇ ಪ್ರಭೋ ॥ 68 ॥
ಯತ್ತತ್ಪರಮಕಂ ಗುಹ್ಯಂ ತ್ವತ್ಪ್ರಸಾದಾದಿದಂ ವಿಭೋ ।
ವಾಸುದೇವ ತದೇತತ್ತೇ ಮಯೋದ್ಗೀತಂ ಯಥಾತಥಮ್ ॥ 69 ॥
ಸೃಷ್ಟ್ವಾ ಸಂಕರ್ಷಣಂ ದೇವಂ ಸ್ವಯಮಾತ್ಮಾನಮಾತ್ಮನಾ ।
ಕೃಷ್ಣ ತ್ವಮಾತ್ಮನೋ ಸಾಕ್ಷೀ ಪ್ರದ್ಯುಮ್ನಂ ಚಾತ್ಮಸಂಭವಮ್ ॥ 70 ॥
ಪ್ರದ್ಯುಮ್ನಾದನಿರುದ್ಧಂ ತ್ವಂ ಯಂ ವಿದುರ್ವಿಷ್ಣುಮವ್ಯಯಮ್ ।
ಅನಿರುದ್ಧೋಽಸೃಜನ್ಮಾಂ ವೈ ಬ್ರಹ್ಮಾಣಂ ಲೋಕಧಾರಿಣಮ್ ॥ 71 ॥
ವಾಸುದೇವಮಯಃ ಸೋಽಹಂ ತ್ವಯೈವಾಸ್ಮಿ ವಿನಿರ್ಮಿತಃ ।
[ತಸ್ಮಾದ್ಯಾಚಾಮಿ ಲೋಕೇಶ ಚತುರಾತ್ಮಾನಮಾತ್ಮನಾ।]
ವಿಭಜ್ಯ ಭಾಗಶೋಽಽತ್ಮಾನಂ ವ್ರಜ ಮಾನುಷತಾಂ ವಿಭೋ ॥ 72 ॥
ತತ್ರಾಸುರವಧಂ ಕೃತ್ವಾ ಸರ್ವಲೋಕಸುಖಾಯ ವೈ ।
ಧರ್ಮಂ ಪ್ರಾಪ್ಯ ಯಶಃ ಪ್ರಾಪ್ಯ ಯೋಗಂ ಪ್ರಾಪ್ಸ್ಯಸಿ ತತ್ತ್ವತಃ ॥ 73 ॥
ತ್ವಾಂ ಹಿ ಬ್ರಹ್ಮರ್ಷಯೋ ಲೋಕೇ ದೇವಾಶ್ಚಾಮಿತವಿಕ್ರಮ ।
ತೈಸ್ತೈರ್ಹಿ ನಾಮಭಿರ್ಯುಕ್ತಾ ಗಾಯಂತಿ ಪರಮಾತ್ಮಕಮ್ ॥ 74 ॥

ಸ್ಥಿತಾಶ್ಚ ಸರ್ವೇ ತ್ವಯಿ ಭೂತಸಂಘಾಃ ಕೃತ್ವಾಶ್ರಯಂ ತ್ವಾಂ ವರದಂ ಸುಬಾಹೋ ।
ಅನಾದಿಮಧ್ಯಾಂತಮಪಾರಯೋಗಂ ಲೋಕಸ್ಯ ಸೇತುಂ ಪ್ರವದಂತಿ ವಿಪ್ರಾಃ ॥ 75 ॥
ಇತಿ ಶ್ರೀಮಹಾಭಾರತೇ ಭೀಷ್ಮಪರ್ವಣಿ ಪಂಚಷಷ್ಟಿತಮೋಽಧ್ಯಾಯೇ ವಾಸುದೇವ ಸ್ತೋತ್ರಮ್ ।

ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ ನಿಯಮಕ್ಕೆ ಕಾರಣರಾದ ಚತುರ್ಮೂರ್ತಿಗಳ ಸಾಕಾರ ರೂಪ ದರ್ಶನ ಭಾಗ್ಯವನ್ನು ಕರುಣಿಸಿ, ಸದ್ಭಕ್ತರಿಗೆ ಆನಂದವನ್ನು ಉಂಟುಮಾಡುತ್ತಿರುವ ಶ್ರೀ ವಾದಿರಾಜರ ಪಾದಪದ್ಮಗಳಿಗೆ ವಂದಿಸುತ್ತಾ, ಜಗದೊಡೆಯರಾದ ಚತುರ್ಮೂರ್ತಿಗಳ ದರ್ಶನ ಭಾಗ್ಯ ಪುನಃ ಪುನಃ ಪ್ರಾಪ್ತವಾಗಲೆಂದು ಪ್ರಾರ್ಥಿಸುತ್ತಾ,

॥ ಸರ್ವೇಜನಾ ಸುಖಿನೋ ಭವಂತು । ಸಕಲ ಸನ್ಮಂಗಳಾನಿ ಭವಂತು ॥

॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

## ಶ್ರೀ ವಾದಿರಾಜ ತೀರ್ಥರ ಶ್ರೀಕೇಶವ ಪಂಚರತ್ನ ಕೃತಿಗಳು.

ಶ್ರೀ ವಾದಿರಾಜ ತೀರ್ಥರು ಶ್ರೀ ಕೇಶವಾದಿ ಚತುರ್ವಿಂಶತಿ ಮೂರ್ತಿಗಳ ಮೇಲೆ ಐದು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಕೀರ್ತನೆಗಳನ್ನು ಒಟ್ಟಾರೆಯಾಗಿ "ಶ್ರೀ ಕೇಶವ ಪಂಚ ರತ್ನ" ಎಂದು ಕರೆಯಲಾಗುತ್ತದೆ.

ಮೊದಲ ಗೀತೆಯಲ್ಲಿ ಶ್ರೀ ವಾದಿರಾಜರು ಎಲ್ಲಾ 24 ಭಗವಂತನ ರೂಪಗಳನ್ನು ಆಹ್ವಾನಿಸಿದ್ದಾರೆ.

ಎರಡನೆಯ ಮತ್ತು ಮೂರನೆಯ ಹಾಡಿನಲ್ಲಿ, ಶ್ರೀ ವಾದಿರಾಜರು ಶ್ರೀ ಭಗವಂತನ ಕಾರುಣ್ಯವನ್ನು ವಿವಿಧ ಅವತಾರಗಳಲ್ಲಿ ನಿರೂಪಿಸಿದ್ದಾರೆ.

ನಾಲ್ಕನೆಯದು ತೆಲುಗು ಜಾನಪದ ಗೀತೆಯ ಶೈಲಿಯಲ್ಲಿದೆ, ಇದರಲ್ಲಿ ಭಗವಂತನ 24 ರೂಪಗಳ ಪ್ರತಿ ನಾಮವನ್ನು ಜಪಿಸುವುದರಿಂದ ಆಗುವ ಪ್ರಯೋಜನವನ್ನು ವಾದಿರಾಜರು ವಿವರಿಸಿದ್ದಾರೆ.

ಕೊನೆಯ ಹಾಡಿನಲ್ಲಿ, ಶ್ರೀ ವಾದಿರಾಜರು ಭಗವಂತನ ಎಲ್ಲಾ 24 ರೂಪಗಳಿಗೆ ಆರತಿ ಮಾಡುತ್ತಾರೆ.

## 1. ರಂಗ ಬಾರೊ ನರಸಿಂಗ ಬಾರೊ

ರಂಗ ಬಾರೊ ನರಸಿಂಗ ಬಾರೊ ||ಪ||

ಅಂಗಜನಯ್ಯ ಕೋನೇರಿತಿಮ್ಮ ರಂಗ ಬಾರೊ ||ಅ.ಪ.||

ಸಾಸಿರ ಮೂರುತಿ ವಾಸವವಂದ್ಯನೆ ಸಾಸಿರನಾಮದೊಡೆಯನೆ
ಸಾಸಿರ ನಾಮದೊಡೆಯನೆ ನರಹರಿ ಕೇಶವ ನಮ್ಮ ಮನೆದೈವ ||1||

ವಾರಣವಂದ್ಯನೆ ಕಾರುಣ್ಯರೂಪನೆ ಪುರಾಣಗಳಲ್ಲಿ ಪೊಗಳುವ
ಪುರಾಣಗಳಲ್ಲಿ ಪೊಗಳುವ ನರಹರಿ ನಾರಾಯಣ ನಮ್ಮ ಮನೆದೈವ||2||

ಯಾದವಕುಲದಲ್ಲಿ ಸಾಧುಗಳರಸನೆ ಭೇದಿಸಿ ದನುಜರ ಗೆಲಿದನೆ
ಭೇದಿಸಿ ದನುಜರ ಗೆಲಿದನೆ ನರಹರಿ ಮಾಧವ ನಮ್ಮ ಮನೆದೈವ ||3||

ದೇವೆಂದ್ರ ಮಳೆಗರೆಯೆ ಗೋವರ್ಧನ ಗಿರಿಯೆತ್ತಿ ಆ ಗಿರಿಯ ಶ್ರೀಕೃಷ್ಣ ಕೊಡೆಮಾಡಿ
ಆ ಗಿರಿಯ ಶ್ರೀಕೃಷ್ಣ ಕೊಡೆಮಾಡಿ ಕಾಯಿದನೆ ಗೋವಿಂದ ನಮ್ಮ ಮನೆದೈವ ||4||

ಸೃಷ್ಟಿಗೆ ಕರ್ತನೆ ದುಷ್ಟಕಂಸನ ಗೆಲಿದು ಶಿಷ್ಟ ಪರಿಪಾಲನೆನಿಸಿದ
ಶಿಷ್ಟಪರಿಪಾಲನೆನಿಸಿದ ನರಹರಿ ವಿಷ್ಣುವೆ ನಮ್ಮ ಮನೆದೈವ||5||

ಮಧುವೆಂಬೊ ದೈತ್ಯನ ಮುದದಿಂದ ಗೆಲಿದನೆ ವಿದುರನ ಮನೆಯಲಿ ನಲಿದುಂಡ
ವಿದುರನ ಮನೆಯಲಿ ನಲಿದುಂಡ ನರಹರಿ ಮಧುಸೂದನ ನಮ್ಮ ಮನೆದೈವ ||6||

ಚಕ್ರವ ಪಿಡಿದನೆ ಭೂಚಕ್ರವ ಗೆಲಿದನೆ ಅಕ್ರೂರನೊಡನೆ ಮಧುರೆಗೆ
ಅಕ್ರೂರನೊಡನೆ ಮಧುರೆಗೆ ಪೋದ ತ್ರಿ-ವಿಕ್ರಮ ನಮ್ಮ ಮನೆದೈವ||7||

ಸಾಮವನೋದುತ್ತ ದಾನವ ಬೇಡುತ್ತ ನಾಮದ ಮಹಿಮೆ ಪೊಗಳುತ್ತ
ನಾಮದ ಮಹಿಮೆ ಪೊಗಳುತ್ತ ನರಹರಿ ವಾಮನ ನಮ್ಮ ಮನೆದೈವ||8||

ಶ್ರೀಧರ ಎಸಿಸಿದ ಶ್ರೀವತ್ಸ ಲಾಂಛನ ಶ್ರೀಧರ ಗೋಪೀತನಯನೆ
ಶ್ರೀಧರ ಗೋಪೀತನಯನೆ ನರಹರಿ ಶ್ರೀಧರ ನಮ್ಮ ಮನೆದೈವ ||9||

ಋಷಿಜನ ವಂದ್ಯನೆ ಬಿಸಜನಾಭನೆ ದೇವ ಋಷಿಜನರಿಗೆಲ್ಲ ಅಭಯವ
ಋಷಿಜನರಿಗೆಲ್ಲ ಅಭಯವ ಕೊಡುವೋನೆ ಹೃಷಿಕೇಶನೆ ನಮ್ಮ ಮನೆದೈವ||10||

ಪದುಮಸಂಭವಪಿತ ಪದುಮದಾಮೋದರ ಪದುಮದಿಂದಭಯವ ಕೊಡುವೋನೆ
ಪದುಮದಿಂದಭಯವ ಕೊಡುವೋನೆ ನರಹರಿ
ಪದುಮನಾಭನೆ ನಮ್ಮ ಮನೆದೈವ ||11||
ನಾಮದ ಮಹಿಮೆಯ ಪ್ರೇಮದಿ ಪೊಗಳಲು ಕಾಮಿತಾರ್ಥಗಳ ಕೊಡುವೋನೆ
ಕಾಮಿತಾರ್ಥಗಳ ಕೊಡುವೋನೆ ನರಹರಿ ದಾಮೋದರ ನಮ್ಮ ಮನೆದೈವ ||12||
ಸಂಕಟಗಳ ತರಿವೋನೆ ಪಂಕಜನಾಭನೆಶಂಕೆಯಿಲ್ಲದೆ ಅಸುರರ
ಶಂಕೆಯಿಲ್ಲದೆ ಅಸುರರ ಸಂಹರಿಸಿದ ಸಂಕರ್ಷಣ ನಮ್ಮ ಮನೆದೈವ ||13||
ವಸುದೇವತನಯನೆ ಶಿಶುಪಾಲನ ಗೆಲಿದನೆ ವಶವ ಮಾಡಿದೆಯೊ ತ್ರಿಪುರರ
ವಶವ ಮಾಡಿದೆಯೊ ತ್ರಿಪುರರ ನರಹರಿ ವಾಸುದೇವ ನಮ್ಮ ಮನೆದೈವ||14||
ಶುದ್ಧಸ್ವರೂಪನೆ ಶುದ್ಧ ಭಕ್ತರನು ಸಲಹಯ್ಯ ಹದ್ದುವಾಹನನಾದ ದೇವನೆ
ಹದ್ದುವಾಹನನಾದ ದೇವನೆ ನರಹರಿ ಪ್ರದ್ಯುಮ್ನ ನಮ್ಮ ಮನೆದೈವ ||15||
ವನಜಲೋಚನ ಹರಿ ವಿನಯ ಉಳ್ಳವನೆ ಧ್ವನಿಕೇಳಿ ಬಂದ ಕುಬುಜೆಯ
ಧ್ವನಿಕೇಳಿ ಬಂದ ಕುಬುಜೆಯ ನರಹರಿ ಅನಿರುದ್ಧ ನಮ್ಮ ಮನೆದೈವ ||16||
ಪಾರಿಜಾತದ ಹೂವ ನಾರಿಗೆ ಇತ್ತನೆ ವೀರ ದಾನವರ ಗೆಲಿದನೆ
ವೀರ ದಾನವರ ಗೆಲಿದನೆ ನರಹರಿ ಪುರುಷೋತ್ತಮ ನಮ್ಮ ಮನೆದೈವ ||17||
ಅಕ್ಷಯಪದವೀವ ಪಕ್ಷಿವಾಹನಸ್ವಾಮಿ ಕುಕ್ಷಿಯೊಳೀರೇಳು ಭುವನವ
ಕುಕ್ಷಿಯೊಳೀರೇಳು ಭುವನವನಾಳಿದ ನರಹರಿ ಅಧೋಕ್ಷಜ ನಮ್ಮ ಮನೆದೈವ||18||
ನರಕಾಸುರನ ಕೊಂದು ಹಿರಣ್ಯನ ಮರ್ದಿಸಿ ಕರುಳ ಬಗೆದು ವನಮಾಲೆ ಹಾಕಿ
ಕರುಳ ಬಗೆದು ವನಮಾಲೆ ಹಾಕಿದ ಹರಿ ನರಸಿಂಹನೆ ನಮ್ಮ ಮನೆದೈವ||19||
ಅಚ್ಚುತಾನಂತನೆ ಸಚ್ಚಿದಾನಂದನೆ ಮಚ್ಛಾವತಾರದಿ ನಲಿದನೆ
ಮಚ್ಛಾವತಾರದಿ ನಲಿದನೆ ನರಹರಿ ಅಚ್ಚುತ ನಮ್ಮ ಮನೆದೈವ ||20||
ಜಾನಕಿರಮಣನೆ ದಾನವಾಂತಕನೆ ದೀನರಕ್ಷಕನೆ ಸಲಹಯ್ಯ
ದೀನರಕ್ಷಕನೆ ಸಲಹಯ್ಯ ನರಹರಿ ಜನಾರ್ದನ ನಮ್ಮ ಮನೆದೈವ ||21||
ಅಪರಿಮಿತಮಹಿಮನೆ ವಿಪರೀತ ಚರಿತನೆ ಗುಪಿತವೇಷಗಳ ತಾಳಿದನೆ
ಗುಪಿತವೇಷಗಳ ತಾಳಿದ ನರಹರಿ ಉಪೇಂದ್ರ ನಮ್ಮ ಮನೆದೈವ ||23||

ಹರನ ಭಸ್ಮಾಸುರನು ಮರಳಿ ಬೆನ್ನ ತ್ತಲು ತರುಣಿರೂಪವನು ತಾಳಿದನೆ
ತರುಣಿರೂಪವನು ತಾಳಿದ ನರಹರಿ ಶ್ರೀ-ಹರಿಯೆ ನಮ್ಮ ಮನೆದೈವ ||23||
ಕೃಷ್ಣಾವತಾರದಲಿ ದುಷ್ಟರ ಗೆಲಿದನೆ ವೃಷ್ಣಿಯರ ಕುಲತಿಲಕನೆ
ವೃಷ್ಣಿಯರ ಕುಲತಿಲಕನೆ ನರಹರಿ ಶ್ರೀ-ಕೃಷ್ಣನೆ ನಮ್ಮ ಮನೆದೈವ ||24||
ಇಪ್ಪತ್ತು ನಾಲ್ಕು ನಾಮಂಗಳ ಪಾಡುವೆನು ಅಪ್ಪ ಕೇಶವನ ಚರಿತೆಯನು
ಅಪ್ಪ ಕೇಶವನ ಚರಿತೆಯನು ಪಾಡಲು ಒಪ್ಪಿಸಿಕೊಳ್ಳುವ ಹಯವದನ||25||

## 2. ಕೃಷ್ಣ ಮುರಾರಿ ಕೇಶವ ಮುರಾರಿ

ಕೃಷ್ಣ ಮುರಾರಿ ಕೇಶವ ಮುರಾರಿ ಅಚ್ಚುತಾನಂತ ಗೋವಿಂದ ಮುರಾರಿ||ಪ||
ವೇಷಧಾರಿಯಾಗಿ ಬಂದು ಅಸುರರ ಸಂಹರಿಸಿಭೂಸುರರಿಗ್ವೊರವನಿತ್ತ್ಯೋ ಕೇಶವ ಮುರಾರಿ ||1||
ನಾ ತಾಳಲಾರೆನೊ ಲೋಕಾಧಿಪತಿಯೆ ಕಾಯೊಅನಾಥರಕ್ಷಕ ನಾರಾಯಣನೆ ಮುರಾರಿ ||2||
ಮನಸು ನಿಲ್ಲದು ದೇವ ಮಾರನಟ್ಟುಳಿಗೆನ್ನಮನಕಾಗಿ ನೀನೆ ಬಾರೊ ಮಾಧವ ಮುರಾರಿ||3||
ಅನೇಕ ಗೋವ್ಗಳ ಕಾಯ್ದ ಗೋಪಾಲಮೂರುತಿಗೋಪಿಯರರಸ ಗೋವಿಂದ ಮುರಾರಿ ||4||
ಕಟ್ಟಿದ ಕಾಮನೆಯ ಬಿಟ್ಟು ಕಳಚಿ ಮನ-ದಿಷ್ಟಾರ್ಥವನೀವ ವಿಷ್ಣು ಮುರಾರಿ ||5||
ಮಧುರವಾಕ್ಯಗಳಿಂದ ಮಂದಿರಕಾಗಿ ಬಾರೊಮನಸಿಜನಯ್ಯ ಮಧುಸೂದನ ಮುರಾರಿ ||6||
ತಿದ್ದಿದ ಕಸ್ತುರಿತಿಲಕ ತಿಗುರಿದ ಪರಿಮಳಗಂಧಮುದ್ದು ನಸುನಗೆಯ ತ್ರಿವಿಕ್ರಮ ಮುರಾರಿ||7||
ಕಾಮಿನಿ ಅಗಲಿಬಂದು ಸೀಮೆನಾಳುವೆÀನೆಂದುನೇಮವಾಕ್ಯದಿ ನಿಂದ ವಾಮನ ಮುರಾರಿ ||8||
ಶ್ರೀಯರಸ ಮೇಳದಿ ರಮಿಸಿ ಬಹುಕಾಲದಿಸಿಂಧುಶಯನ ಶ್ರೀಧರನೆ ಮುರಾರಿ ||9||
ಋಷಿಗಳಿಗ್ವರವಿತ್ತು ಬೃಂದಾವನದಲ್ಲಿ ನಿಂದುಹರುಷವಾರಿಧಿ ಹೃಷಿಕೇಶ ಮುರಾರಿ ||10||
ಪಾವನ್ನ ಮೂರುತಿ ಪರಮದಯಾಳು ನೀನೆಪಾಲಿಸೊ ಶ್ರೀಪದ್ಮನಾಭ ಮುರಾರಿ||11||
ದಾನವರ ಮರ್ದಿಸಿ ಸುಮನಸರಿಗೊಲಿದದಾನದತ್ತನೆ ದಾಮೋದರನೆ ಮುರಾರಿ ||12||
ಶಂಕೆಯಿಲ್ಲದೆ ಗೆಲಿಸು ಶಂಖಚಕ್ರವ ಧÀರಿಸಿ ಅ-ಲಂಕಾರವಾದ ಸಂಕರ್ಷಣನೆ ಮುರಾರಿ ||13||
ಶೇಷಶಯನ ಸಾಧು ಸಜ್ಜನರ ಪೋಷನೀ ಸಲವೊ ವಾಸುದೇವ ಮುರಾರಿ ||14||
ಇದ್ದ ಗೋಪೇರಮನೆಯ ಕದ್ದು ಬೆಣ್ಣೆಯ ಮೆದ್ದಪದ್ಮದಳಾಕ್ಷ ಪ್ರದ್ಯುಮ್ನ ಮುರಾರಿ ||15||

ಅನಿಮಿಷನಾಗಿ ಬಂದು ಯಾದವರನೆಲ್ಲ ಗೆಲಿದಆ ಮಹಾಮಹಿಮ ಅನಿರುದ್ಧ ಮುರಾರಿ||16||

ಪುನಗು ಕಸ್ತೂರಿಗಂಧ ಪರಿಮಳಪುಷ್ಪದಿಂದ ಪುಣ್ಯಮೂರುತಿ ಪುರುಷೋತ್ತಮನೆ ಮುರಾರಿ ||17||

ರಕ್ಷಿಸೋ ನೀ ಎನ್ನ ಅಕ್ಷಯದಿಂದಲಿರಕ್ಷಿಸೋ ಅವನಿ ಅಧೋಕ್ಷಜ ಮುರಾರಿ ||18||

ನಾನೇನ ಪೇಳಲಿ ನಗೆನಗೆಯಲ್ಲಿ ಅಕ್ಷಿಕ್ರೂರವಾಯಿತು ನಾರಸಿಂಹ ಮುರಾರಿ ||19||

ಮೆಚ್ಚಿದೆ ನಾ ನಿನ್ನ ಪಕ್ಷಿವಾಹನ ಸ್ವಾಮಿಮುಚ್ಚುಮರೆಗಳ್ಯಾಕೊ ಅಚ್ಚುತ ಮುರಾರಿ ||20||

ಜಾಣತನದಿ ಪೋಗಿ ಜಾರಸ್ತ್ರೀಯರನ್ನುಒಡಗೂಡಿ ಆಡಿದ ಜನಾರ್ದನ ಮುರಾರಿ||21||

ಉಗುರಲ್ಲಿ ಹಿರಣ್ಯಕನ ಸೀಳಿ ಉರದಲ್ಲಿ ಮಾಲೆಯ ಧರಿಸಿ

ಉಬ್ಬಲ್ಲಿ ಮೆರೆದ ಉಪೇಂದ್ರ ಮುರಾರಿ ||22||

ಹಿರಣ್ಯಾಕ್ಷತನಯನಂದು ಕರೆಯೆ ಕಂಬದಿ ಬಂದಗರುವದಿಂದಲೆ ನರಹರಿಯೆ ಮುರಾರಿ ||23||

ಅಟ್ಟಡವಿಯ ತಪಸು ಎಷ್ಟುದಿನವೊ ಸ್ವಾಮಿಪಟ್ಟಣಕಾಗಿ ಬಾರೊ ಕೃಷ್ಣಮುರಾರಿ ||24||

ಎಲ್ಲರ ಸಲಹಿದ ಫುಲ್ಲಲೋಚನ ಸ್ವಾಮಿಪಾಲಿಸೊ ಶ್ರೀಹಯವದನ ಮುರಾರಿ ||25||

### 3. ಕೇಶವ ಜಗದೀಶ ಸಾಸಿರಭಾಸುರ

ಕೇಶವ ಜಗದೀಶ ಸಾಸಿರಭಾಸುರ ಕೋಟಿಸಂಕಾಶ ವಾಸವಾದಿಗಳ ವಂದ್ಯ ಸೀತಾಪತೆ ||1||

ನಾರಾಯಣ ಸಕಲವೇದಪಾರಾಯಣ ಕೃಷ್ಣ ನಾರದಾದಿಗಳ ವಂದ್ಯ ಸೀತಾಪತೆ ||2||

ಮಾಧವ ಮಂಗಳಗಾತ್ರ ವೇದವನ್ನೆ ಕದ್ದು ಒಯ್ದ ಆ ಖಳನ ಕೊಂದೆ ಸೀತಾಪತೆ ||3||

ಗೋವಿಂದ ಗೋಕುಲಬಾಲ ಗೋಪಿಯರ ಮನೋಹರ ಆದಿ ಕೂರ್ಮಾವತಾರ ಸೀತಾಪತೆ ||4||

ವಿಷ್ಣುವೆ ಯತಿಗಳ ವಂದ್ಯ ಅಷ್ಟಲಕ್ಷ್ಮಿಯರ ನಾಥ ದಿಟ್ಟ ವಃರಾಹರೂಪನಾದ ಸೀತಾಪತೆ ||5||

ಮಧುಸೂಧನ ಮಾವನ ವೈರಿ ಯದುಕುಲಕ್ಕೆ ತಿಲಕನಾದ

ಚೆಲುವನಾದ ಹರಿ ನೀನೆ ಸೀತಾಪತೆ ||6||

ತ್ರಿವಿಕ್ರಮರೂಪನಾಗಿ ತ್ರಿಜಗವನ್ನೆ ಪಾಲಿಸಿದ ವಾಮನರೂಪಿ ನೀನೆ ಸೀತಾಪತೆ||7||

ವಾಮನರೂಪವ ತಾಳಿ ಆ ಮಹಾಬಲಿಯನ್ನೆ ತುಳಿದು ನೇಮದಿ ಕ್ಷತ್ರೇರ ಕೊಂದ ಸೀತಾಪತೆ||8||

ಶ್ರೀಧರ ನೀನೆಂದೆನಿಸಿ ಶೋಷಿಸಿ ಖಳನೆಲ್ಲ ಜಾನಕಿಯ ತಂದ ರಾಮ ಸೀತಾಪತೆ ||9||

ಹೃಷೀಕೇಶ ನೀನೆಂದು ಋಷಿಗಳು ಸ್ತುತಿಯ ಮಾಡಿ ವಸುದೇವಸುತ ಕೃಷ್ಣ ಸೀತಾಪತೆ ||10||

ಪದ್ಮನಾಭನೆಂದು ವೇದ ಸಿದ್ಧವಾಗಿ ಪೊಗಳುತಿಧೆ ಬುದ್ಧಾವತಾರ ಕೃಷ್ಣ ಸೀತಾಪತೆ ||11||

ದಾಮೋದರನೆಂದು ನಿಮ್ಮ ದೇವತೆಗಳೆಲ್ಲ ಕರೆಯೆ ಆ ಮಹಾ ಕಲ್ಯ್ಕಾನಾದ ಸೀತಾಪತೆ||12||

ಸಂಕರುಷಣ ದೇವ ನಿಮ್ಮ ಕಿಂಕರರು ನಾವೆಲ್ಲರಯ್ಯ
ಪಂಕಜಾಸನವಂದ್ಯ ರಾಮ ಸೀತಾಪತೆ ||13||

ವಾಸುದೇವ ನಿಮ್ಮ ಪಾದಕ್ಕೆ ವಂದನೆಯ ಮಾಡುವೆನಯ್ಯ
ದೋಷರಾಶಿ ನಾಶಮಾಡು ಸೀತಾಪತೆ ||14||

ಪ್ರದ್ಯುಮ್ನನೆಂದು ಸುರರು ಎದ್ದು ನಿನ್ನೆ ಪೊಗಳುತ್ತಿರೆ ಉದ್ಧಾರ ಮಾಡಿದ ದೇವ ಸೀತಾಪತೆ ||15||

ಅನಿರುದ್ಧನೇ ಗತಿಯೆಂದು ಅನುದಿನ ನಿನ್ನ ಕರೆಯೆ ಅನಿಮಿತ್ತಬಂಧು ಕೃಷ್ಣ ಸೀತಾಪತೆ ||16||

ಪುರುಷೋತ್ತಮ ಪುಣ್ಯ ನಾಮ ಸ್ಮರಿಸುವ ಜನರ
ಮನೋಹರುಷ ನೀಡಿದ ರಾಮ ಸೀತಾಪತೆ ||17||

ಅಧೋಕ್ಷಜ ಲೋಕಗಳಿಗೆ ಆಧಾರಭೂತನಾ ಗಿರುವೆ ವೇದವೇದ್ಯರಾಮ ಸೀತಾಪತೆ ||18||

ನಾರಸಿಂಹ ನರನಿಗೆ ವೇದ ಗೀತೆಗಳನೆಲ್ಲ ಬೋಧನೆಯನ್ನು ಮಾಡಿದ ಸೀತಾಪತೆ ||19||

ಅಚ್ಯುತ ವಿಶ್ವಾಮಿತ್ರ ಅತಿಶಯ ಯಾಗವ ಕಾಯ್ದ ಭಕ್ತವತ್ಸಲ ರಾಮ ಸೀತಾಪತೆ ||20||

ಜನಾರ್ದನರೂಪನಾಗಿ ಜಾನಕಿಯ ತಂದ ಜಾಹ್ನವೀಜನಕ ರಾಮ ಸೀತಾಪತೆ ||21||

ಉಪೇಂದ್ರನೆ ಉದ್ಧವಗೆ ಉಪದೇಶವನೆ ಮಾಡಿ ಅಪರಿಮಿತಪದವಿ ಕೊಟ್ಟ ಸೀತಾಪತೆ ||22||

ಹರಿ ಹರಿಯೇ ರಕ್ಷಿಸೆಂದು ಹಲವು ಕಾಲ ತಪವ ಮಾಡಿ
ಚರಿಸುವರಿಗೆ ಮೋಕ್ಷವಿತ್ತೆ ಸೀತಾಪತೆ ||23||

ರಕ್ಷಿಸಯ್ಯ ಕೃಷ್ಣ ರಾಮ ರಕ್ಷಿಸಯ್ಯ ಹಯವದನ ಪಕ್ಷಿವಾಹನ ರಾಮ ಸೀತಾಪತೆ ||24||

## 4. ಗುಬ್ಬಿಯಾಳೊ ಗೋವಿಂದ

ಗುಬ್ಬಿಯಾಳೊ ಗೋವಿಂದ ಗೋವಿಂದಾ |
ಗೋವಿಂದ ಗೋವಿಂದಾನೆಂದು ನೆನೆಯಿರೊ ಗುಬ್ಬಿಯಾಳೊ ||ಪ||

ಕೇಶವನ್ನ ನೆನೆದರೆ ಕ್ಲೇಶ ಪರಿಹಾರವು ಗುಬ್ಬಿಯಾಳೊ
ನಾರಾಯಣನ ಧ್ಯಾನದಿಂದ ನರಕಭಯವಿಲ್ಲವೊ ಗುಬ್ಬಿಯಾಳೊ ||೧||

ಮಾಧವನ್ನ ನೆನೆದರೆ ಮನೋಭೀಷ್ಟ ಕೊಡುವೊನು ಗುಬ್ಬಿಯಾಳೊ
ಗೋವಿಂದನ್ನ ದಯದಿಂದ ಘೋರದುರಿತ ನಾಶನವು ಗುಬ್ಬಿಯಾಳೊ ||೨||
ವಿಷ್ಣುಭಜನೆಯಿಲ್ಲದವಗೆ ವೈಷ್ಣವರ ಜನ್ಮವುಂಟೇ ಗುಬ್ಬಿಯಾಳೊ
ಮಧುಸೂದನನ ಧ್ಯಾನದಿಂದ ಅತಿಶಯವು ಇಹುದೊ ಗುಬ್ಬಿಯಾಳೊ ||೩||
ತ್ರಿವಿಕ್ರಮನ ನೆನೆದರೆ ಸಾವಿತ್ರಿಯಾಗಿಹರೊ ಗುಬ್ಬಿಯಾಳೊ
ವಾಮನದೇವರು ನಮಗೆ ವರಗಳ ಕೊಡುವೋರು ಗುಬ್ಬಿಯಾಳೊ ||೪||
ಶ್ರೀಧರನ್ನ ನೆನೆದರೆ ಸಿರಿ ನಮಗೆ ಒಲಿವಳೊ ಗುಬ್ಬಿಯಾಳೊ
ಹೃಷೀಕೇಶನ ಧ್ಯಾನದಿಂದ ಹೃದಯ ಪರಿಶುದ್ಧವೊ ಗುಬ್ಬಿಯಾಳೊ ||೫||
ಪದ್ಮನಾಭ ನಮ್ಮೆಲ್ಲರ ಪಾಲಿಸಿ ರಕ್ಷಿಪನೊ ಗುಬ್ಬಿಯಾಳೊ
ದಾಮೋದರನ ನೆನೆದರೆ ಪಾಮರತ್ವ ಬಿಡಿಸುವನೊ ಗುಬ್ಬಿಯಾಳೊ ||೬||
ಸಂಕರ್ಷಣನ ಧ್ಯಾನದಿಂದ ಸಂತಾನ ಅಭಿವೃದ್ಧಿಯು ಗುಬ್ಬಿಯಾಳೊ
ವಾಸುದೇವನ ದಯದಿಂದ ವಂಶ ಉದ್ಧಾರವೊ ಗುಬ್ಬಿಯಾಳೊ ||೭||
ಪ್ರದ್ಯುಮ್ನನ ನೆನೆದರೆ ಭೂಪ್ರದಕ್ಷಿಣೆ ಫಲವು ಗುಬ್ಬಿಯಾಳೊ
ಅನಿರುದ್ಧನ ಸೇವಿಸೆ ಪುನೀತರಹೆವೊ ಗುಬ್ಬಿಯಾಳೊ ||೮||
ಪುರುಷೋತ್ತಮನ್ನ ಪುರಾಣಪುರುಷನೆಂದು ತಿಳಿಯಿರೊ ಗುಬ್ಬಿಯಾಳೊ
ಅಧೋಕ್ಷಜ ನಮ್ಮೆಲ್ಲರಿಗಾಧಾರವಾಗಿಹನೊ ಗುಬ್ಬಿಯಾಳೊ ||೯||
ನಾರಸಿಂಹದೇವರು ನಮ್ಮ ಕುಲದೈವವೊ ಗುಬ್ಬಿಯಾಳೊ
ಅಚ್ಯುತ ಲಕ್ಷ್ಮಿಯ ಕೂಡಿ ಸಚ್ಚಿದಾನಂದನೊ ಗುಬ್ಬಿಯಾಳೊ ||೧೦||
ಜನಾರ್ದನದೇವರು ಜಗಕೆಲ್ಲ ಶ್ರೇಷ್ಠರೊ ಗುಬ್ಬಿಯಾಳೊ
ಉಪೇಂದ್ರನು ನಮ್ಮ ಅಪರಾಧವ ಕ್ಷಮಿಸುವನೊ ಗುಬ್ಬಿಯಾಳೊ ||೧೧||
ಹರಿನಾಮಾಮೃತಕೆ ಸರಿ ಧರೆಯೊಳಗೆ ಇಲ್ಲವೊ ಗುಬ್ಬಿಯಾಳೊ
ಶ್ರೀಕೃಷ್ಣ ರಂಗೇಶಯೆಂಬೊ ಸಿದ್ಧಕ್ರಿಯ ಬಲ್ಲರೆ ಗುಬ್ಬಿಯಾಳೊ ||೧೨||
ಈ ಗುಬ್ಬಿ ಪಾಡುವರಿಗೆ ಇಹ ಪರವು ಸಂತತವು ಗುಬ್ಬಿಯಾಳೋ
ಧರಣಿಯೊಳು ಆಚಂದ್ರಾರ್ಕ ತಾರಕವಾಗಿಹರು ಗುಬ್ಬಿಯಾಳೊ ||೧೩||

ಹಯವದನನ್ನ ಪಾದಧ್ಯಾನ ನಿತ್ಯ ಮರೆಯದೆ ನೀ ನೆನೆ ಮನವೆ

ನಮ್ಮ ಹಯವದನನ್ನ ಪಾದವೇ ನಿತ್ಯ ಮನವೆ ಗುಬ್ಬಿಯಾಳೊ ||೧೪ ||

## 5. ಆರತಿಯೆತ್ತಿದರೆ ಕೇಶವ ನಾರಾಯಣಗೆ

ಆರತಿಯೆತ್ತಿದರೆ ಕೇಶವ ನಾರಾಯಣಗೆ ||ಪ||

ಶಾಶ್ವತವೀವ ಮಾಧವ ವಾಸವವಂದ್ಯ ಗೋವಿಂದಗಾರತಿಯನೆತ್ತಿದರೆ ||ಅ.ಪ||

ದ್ವಾಪರ ರಹಿತ ಶ್ರೀವಿಷ್ಣುವಿಗೆ ಅಪಾರ ಮಧುಸೂದನಗೆ

ಪಾಪರಹಿತ ತ್ರಿವಿಕ್ರಮಗಾರತಿಯನೆತ್ತಿದರೆ||

ಸಾಧುಸೇವಿತ ವಾಮನಗೆ ಶ್ರೀಧರ ಹೃಷೀಕೇಶನಿಗೆ

ಆದಿಮೂರುತಿ ಪದ್ಮನಾಭಗಾರತಿಯನೆತ್ತಿದರೆ ||

ದಾಮೋದರ ವಾಲುಳ್ಳವಗೆ ಪ್ರೇಮದಿ ಸಂಕರ್ಷಣಗೆ

ಕಾಮಿತಾರ್ಥವನೀವ ವಾಸುದೇವಗಾರತಿಯನೆತ್ತಿದರೆ ||

ಅನಿರುದ್ಧ ಪುರುಷೋತ್ತಮಗೆ ವಿನಯದಿಂದಲಿ ಅಧೋಕ್ಷಜಗಾರತಿಯನೆತ್ತಿದರೆ ||

ನರಸಿಂಹರೂಪನಾದವಗೆ ವರದ ಮೂರುತಿ ಅಚ್ಯುತಗೆ

ಅರಿಭಯಂಕರ ಜನಾರ್ದನಗಾರತಿಯನೆತ್ತಿದರೆ ||

ಉಪೇಂದ್ರನೆಂದೆನಿಸಿಕೊಂಡವಗೆ ಅಪಾರಮಹಿಮ ಶ್ರೀಹರಿಗೆ

ಗೋಪಾಲಮೂರುತಿ ಶ್ರೀಕೃಷ್ಣಗಾರತಿಯನೆತ್ತಿದರೆ ||

ಚತುರವಿಂಶತಿಮೂರುತಿಗಳಾ ಅತಿಶಯ ಧವಳವ ಪಾಡೆ

ಸತುಪುರುಷರಿಷ್ಟಾರ್ಥವೀವನು ಸಿರಿ ಹಯವದನ ||

**|| ಶ್ರೀ ಕೃಷ್ಣಾರ್ಪಣಮಸ್ತು ||**